**ಕೆಪಿಎಲ್‌ಸಿ/ಎಡಿಎಂ/ಸಿಆರ್/17/13-14** **ದಿನಾಂಕ:14-09-2015**

ಮಾನ್ಯರೇ,

**ವಿಷಯ:** ಅಕ್ರಮ ಹಾಗೂ ಅನಧಿಕೃತ ಭೂ ಮಂಜೂರಾತಿ ಕಡತಗಳನ್ನು ಸೃಷ್ಟಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಛೇರಿಗೆ ವರ್ಗಾಯಿಸಿರುವ ಪ್ರಕರಣಗಳ ಬಗ್ಗೆ ಜರುಗಿಸಿದ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವ ಬಗ್ಗೆ.

**ಉಲ್ಲೇಖ:** ಈ ನಿಗಮದ ಸಮ ಸಂಖ್ಯೆಯ ಪತ್ರ ದಿನಾಂಕ: 10.07.2015

****

ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ಬೆಂಗಳೂರು ನಗರ ಜಿಲ್ಲೆಗೆ ಕಡತಗಳ ವರ್ಗಾವಣೆ ಸಮಯದಲ್ಲಿ ದೊರೆತ ಸೃಷ್ಟಿತ ಹಾಗೂ ಅಕ್ರಮ ಭೂ ಮಂಜೂರಾತಿ ಕಡತಗಳಿಗೆ ಸಂಬಂಧಪಟ್ಟಂತೆ 1437-38 ಎ.ಗುಂ. ಸರ್ಕಾರಿ ಜಮೀನಿಗೆ ಖಾಸಗಿ ವ್ಯಕ್ತಿಗಳ ಹೆಸರಿಗೆ ಆಗಿರುವ ಖಾತೆ ಬದಲಾವಣೆ ವಿಚಾರವಾಗಿ ದಿನಾಂಕ: 24.11.2012ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ ಕೆಲವೊಂದು ಕ್ರಮಗಳನ್ನು ಜರುಗಿಸಲು ಸೂಚಿಸಿರುತ್ತಾರೆ. ಈ ನಿಗಮದಿಂದ ದಿನಾಂಕ: 10.07.2015ರಂದು ತಮಗೆ ಬರೆದಿರುವ ಪತ್ರದಲ್ಲಿ ಸರ್ಕಾರದ ಸೂಚನೆಗಳ ಅನ್ವಯ ಜರುಗಿಸಿದ ಕ್ರಮಗಳ ಬಗ್ಗೆ 03 ದಿನಗಳೊಳಗಾಗಿ ಮಾಹಿತಿ ಒದಗಿಸುವಂತೆ ಕೋರಲಾಗಿತ್ತು. ಆದರೆ ಇದುವರೆಗೆ ತಮ್ಮಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ.

ಈ ರೀತಿಯ ಗಂಬೀರ ಸ್ವರೂಪದ ವಿಷಯದಲ್ಲಿ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇದ್ದಲ್ಲಿ, ಇದುವರೆಗೆ ನಡೆಸಿರುವ ಪ್ರಕ್ರಿಯೆಗಳು ಹಾಗೂ ಸರ್ಕಾರ ನೀಡಿರುವ ಸೂಚನೆಗಳ ಉದ್ದೇಶ ಪರಾಭವಗೊಳ್ಳುತ್ತದೆ. ಸರ್ಕಾರಿ ಜಮೀನು ಸಂರಕ್ಷಣಾ ಕರ್ತವ್ಯ ಜಿಲ್ಲಾಡಳಿತದಲ್ಲಿ ನಿಹಿತಗೊಂಡಿರುತ್ತದೆ. ಸರ್ಕಾರದಿಂದ ದಿನಾಂಕ: 24.11.2012ರ ಪತ್ರದಲ್ಲಿ ಈ ವಿಷಯದ ಬಗ್ಗೆ ಜಿಲ್ಲಾಢಳಿತ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆಗಳನ್ನು ನೀಡಿದ್ದು, ತದನಂತರ ಈ ನಿಗಮದಿಂದ ಜಿಲ್ಲಾಡಳಿತ ಕೈಗೊಂಡಿರುವ ಕ್ರಮಗಳ ಬಗ್ಗೆ ತಿಳಿಸಿಸುವಂತೆ ದಿನಾಂಕ: 22.10.2013, 11.3.2014, 22.4.2014. 30.06.2014 ಮತ್ತು 29.10.2014 ಹಾಗೂ 10.07.2015ರ ಈ ನಿಗಮದ ಪತ್ರಗಳಲ್ಲಿ ಕೋರಿದ್ದಾಗ್ಯೂ, ಇದುವರೆಗೆ ಯಾವುದೇ ಮಾಹಿತಿಗಳನ್ನು ಒದಗಿಸದೇ ಇರುವುದರಿಂದ ಸಾರ್ವಜನಿಕ ಹಿತಾಸಕ್ತಿ ಕಾಪಾಡುವ ದಿಸೆಯಲ್ಲಿ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂಧಿಗಳ ವಿರುದ್ಧ ಕಾನೂನು ಕ್ರಮ ಜರುಗಿಸುವುದು ಅನಿವಾರ್ಯವಾಗುತ್ತದೆ ಎಂಬ ಅಂಶವನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

ಆದ್ದರಿಂದ, ಈ ವಿಷಯವನ್ನು ಅತಿ ಗಂಭೀರವಾಗಿ ಪರಿಗಣಿಸಿ ಖುದ್ದು ಗಮನ ನೀಡಿ, ಈ ಮುಂದಿನ ಅಂಶಗಳ ಬಗ್ಗೆ ಮಾಹಿತಿ ಒದಗಿಸಲು ಕೋರಿದೆ.

1. ಯಾವ ಆಧಾರದ ಮೇಲೆ ಇವರುಗಳ ಹೆಸರನ್ನು ಪಹಣಿಯಲ್ಲಿ ದಾಖಲು ಮಾಡಲಾಗಿದೆ? ಸದರಿ ಒತ್ತುವರಿದಾರರು ಸುಮಾರು ಎಷ್ಟು ಕಾಲದಿಂದ ಒತ್ತುವರಿ ಮಾಡಿಕೊಂಡಿರುತ್ತಾರೆ? ಪ್ರಕರಣಗಳಲ್ಲಿ ಒಳಗೊಂಡಿರುವ ಒತ್ತುವರಿದಾರರು ಬಡ ಕುಟುಂಬದವರೇ ಅಥವಾ ಆರ್ಥಿಕವಾಗಿ ಸಬಲರಾಗಿರುವ ವ್ಯಕ್ತಿಗಳೇ? ಎಂಬ ಬಗ್ಗೆ ಮಾಹಿತಿ ಒದಗಿಸುವುದು.

**2.** ಅಧಿಕೃತ ಭೂ ಮಂಜೂರಾತಿ ಆದೇಶವಿಲ್ಲದೇ ಹಕ್ಕು ಬದಲಾವಣೆ ಮಾಡಿದ್ದಲ್ಲಿ, ಅದರಲ್ಲಿ ಪಾತ್ರವಹಿಸಿರುವ ಅಧಿಕಾರಿಗಳು/ಸಿಬ್ಬಂಧಿಗಳ ವಿವರ ಹಾಗೂ ಇಂತಹ ಸಂದರ್ಭದಲ್ಲಿ, ಸರ್ಕಾರದ ಹಿತಾಸಕ್ತಿ ಕಾಪಾಡುವಲ್ಲಿ ಅಗತ್ಯ ಕ್ರಮ ಜರುಗಿಸಲು ವಿಫಲರಾಗಿರುವ ಅಧಿಕಾರಿ ಮತ್ತು ಸಿಬ್ಬಂಧಿಗಳ ವಿವರ ಒದಗಿಸುವುದು.

ಮೇಲ್ಕಂಡ ಮಾಹಿತಿಗಳೊಂದಿಗೆ, ಸರ್ಕಾರ ದಿನಾಂಕ: 24.11.2012ರ ಪತ್ರದಲ್ಲಿ ನೀಡಿರುವ ಸೂಚನೆಗಳ ಅನ್ವಯ ತಾವು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಗಳನ್ನು ದಿನಾಂಕ: 21.09.2015ರೊಳಗೆ ಈ ನಿಗಮಕ್ಕೆ ತಲುಪಿಸಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/–

**ಶ್ರೀ ವಿ.ಶಂಕರ್, ಭಾ.ಆ.ಸೇ.,**
ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ,
ಬೆಂಗಳೂರು.

(1) ಪ್ರತಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಅವಗಾಹನೆಗಾಗಿ ಸಲ್ಲಿಸಿದೆ.
ಪ್ರತಿಯನ್ನು:
(2) **ಶ್ರೀಮತಿ ನೀಲಾ ಮಂಜುನಾಥ್, ಭಾ.ಆ.ಸೇ.**, ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ದಕ್ಷಿಣ ಉಪ ವಿಭಾಗ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು
(3) **ಶ್ರೀ ಮಹಮದ್ ಸಲಾಹುದ್ದೀನ್, ಭಾ.ಆ.ಸೇ.**, ವಿಶೇಷ ಜಿಲ್ಲಾಧಿಕಾರಿ, ಬೆಂಗಳೂರು ಉತ್ತರ ಉಪ ವಿಭಾಗ, ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು
ಇವರುಗಳಿಗೆ ಕಳುಹಿಸುತ್ತಾ ಈ ನಿಗಮದ ದಿನಾಂಕ: 10.07.2015ರ ಪತ್ರದಲ್ಲಿ ಕೋರಿರುವ ಮಾಹಿತಿಗಳನ್ನು ದಿನಾಂಕ: 21.09.2015 ರೊಳಗಾಗಿ ಈ ನಿಗಮಕ್ಕೆ ತಲುಪಿಸಲು ಕೋರಿದೆ.
(4) **ಪ್ರತಿಯನ್ನು ಶ್ರೀ ಜಿ.ವಿ.ನಾಗರಾಜ್**, ವಿಶೇಷ ಜಿಲ್ಲಾಧಿಕಾರಿ(ಜಾರಿದಳ)(ಪ್ರಭಾರ), ಜಿಲ್ಲಾಧಿಕಾರಿಗಳ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ ಕಳುಹಿಸುತ್ತಾ ಮೇಲ್ಕಾಣಿಸಿರುವ ಎಲ್ಲಾ ಅಂಶಗಳ ಬಗ್ಗೆ ಜರುಗಿಸಿರುವ ಮಾಹಿತಿಗಳನ್ನು ಕ್ರೋಢೀಕರಿಸಿ, ದಿನಾಂಕ 21.09.2015ರೊಳಗೆ ಈ ನಿಗಮಕ್ಕೆ ತಲುಪಿಸಲು ಕೋರಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರ ಪರವಾಗಿ,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿ.